ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1033
ಸದಸ್ಯರ ಹೆಸರು	:	ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	29.09.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಮಹಿಳಾ ಪೌರ ಕಾರ್ಮಿಕರಿಗೆ ತಲಾ ರೂ. 2,500/- ರಂತೆ ಕಲಂ 08ರ ಪ್ರಕಾರ ಮೆಡಿಕಲ್ ಬೋನಸ್ ಮೊತ್ತವನ್ನು ಪಾವತಿಸುವ ಯೋಜನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಹೊರಗುತ್ತಿಗೆ ಮೇಲೆ ಕೆಲಸ ಮಾಡುತ್ತಿರುವ ಎಷ್ಟು ಮಹಿಳಾ ಪೌರ ಕಾರ್ಮಿಕರಿಗೆ ಹೆರಿಗೆ ಸೌಲಭ್ಯಗಳ ಕಾಯ್ದೆ 1961ರ ಅನ್ವಯ ಯಾವ ಯಾವ ಸಾಲಿನಲ್ಲಿ ಎಷ್ಟು ಮೆಡಿಕಲ್ ಬೋನಸ್ ಸಂದಾಯ ಮಾಡಲಾಗಿದೆ;	ಹೆರಿಗೆ ಸೌಲಭ್ಯ ಕಾಯ್ದೆ 1961ರ ನಿಯಮ 6 ರಲ್ಲಿ ಸೂಚಿಸಿದಂತೆ ಮೆಡಿಕಲ್ ಬೋನಸ್ ಮತ್ತು ಹೆರಿಗೆ ಸೌಲಭ್ಯಗಳನ್ನು ಪಡೆಯಲು ಫಲಾನುಭವಿಗಳು ರುಜುವಾತು ಪಡಿಸುವ ದಾಖಲೆಗಳೊಂದಿಗೆ ಅರ್ಜಿಯನ್ನು ಪಾಲಿಕೆಗೆ ನಿಗದಿತ ಅವಧಿಯೊಳಗಾಗಿ ಸಲ್ಲಿಸಬೇಕಾಗಿರುತ್ತದೆ. ಆದರೆ ಈವರೆಗೂ ಅಗತ್ಯ ದಾಖಲೆಗಳೊಂದಿಗೆ ಸದರಿ ಸೌಲಭ್ಯವನ್ನು ಮಂಜೂರು ಮಾಡುವಂತೆ ಕೋರಿ ಹೊರಗುತ್ತಿಗೆ ಮಹಿಳಾ ಪೌರಕಾರ್ಮಿಕರಿಂದ ಯಾವುದೇ ಅರ್ಜಿಗಳು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸ್ವೀಕೃತವಾಗಿರುವುದಿಲ್ಲ.
ಇ)	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಹೊರಗುತ್ತಿಗೆ ಮೇಲೆ ಕೆಲಸ ಮಾಡುತ್ತಿರುವ ಎಷ್ಟು ಹೊರಗುತ್ತಿಗೆ ಮಹಿಳಾ ಪೌರ ಕಾರ್ಮಿಕರಿಗೆ ಹೆರಿಗೆ ಸೌಲಭ್ಯಗಳ ಕಾಯ್ದೆ 1961ರ ಅನ್ವಯ ಭತ್ಯೆ ಸಂದಾಯವಾಗದೆ ಬಾಕಿ ಉಳಿದಿದೆ; ಬಾಕಿ ಉಳಿಯಲು ಕಾರಣಗಳೇನು; ಉಳಿದಿರುವ ಸೌಲಭ್ಯಗಳನ್ನು ಪೂರೈಸುವುದು ಯಾವಾಗ ?	ಹೆರಿಗೆ ಸೌಲಭ್ಯ ಕಾಯ್ದೆ 1961ರ ನಿಯಮ 6 ರಡಿ ಹೊರಗುತ್ತಿಗೆ ಮಹಿಳಾ ಪೌರ ಕಾರ್ಮಿಕರು ಮೆಡಿಕಲ್ ಬೋನಸ್ ಮತ್ತು ಹೆರಿಗೆ ಸೌಲಭ್ಯ ಪಡೆಯಲು ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಕೆಯಾಗದಿರುವ ಕಾರಣ ಭತ್ಯೆಯನ್ನು ಪಾವತಿಸಲಾಗಿರುವುದಿಲ್ಲ ಮತ್ತು ನಿಗದಿತ ಅವಧಿಯೊಳಗೆ ಅಗತ್ಯ ಪೂರಕ ದಾಖಲೆಗಳೊಂದಿಗೆ ಹೊರಗುತ್ತಿಗೆ ಮಹಿಳಾ ಪೌರ ಕಾರ್ಮಿಕರು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಸದರಿ ಸೌಲಭ್ಯವನ್ನು ಮಂಜೂರು ಮಾಡಲು ಪಾಲಿಕೆಯಿಂದ ಕ್ರಮಕೈಗೊಳ್ಳಲಾಗುವುದು.

ಕಡತ ಸಂಖ್ಯೆ: ನಅಇ 47 ಹೆಚ್ ಡಿಎಂಸಿ 2020(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು